ಶ್ರೀ ಶಿವಾನಂದ ಎಸ್. ಪಾಟೀಲ್ : ನಾವು ಪ್ರಶ್ನೆಗಳನ್ನು ಕೇಳಬೇಕು, ಮಾನ್ಯ ಸಚಿವರು ಉತ್ತರಿಸಬೇಕು. ಮಹಾರಾಷ್ಟ್ರದ ಫಿಗರ್ಸ್ ಅನ್ನು ನಾವು ತರಿಸಿಕೊಡುತ್ತೇವೆ. ಅದರ ಬಗ್ಗೆ ಕ್ರಮ ಕೈಗೊಳ್ಳುತ್ತಾರೆಯೇ ಎಂಬ ಬಗ್ಗೆ ಉತ್ತರ ಕೊಡಿಸಿ.

ಶ್ರೀ ಗೋವಿಂದ ಎಂ. ಕಾರಜೋಳ : ಕ್ರಮ ಕೈಗೊಳ್ಳುವುದಲ್ಲ, ಹೆಚ್ಚು ವಸೂಲಿ ಮಾಡಬೇಕು, ಎಷ್ಟು ಕಡಿಮೆಯಾಗಿದೆ ಅಷ್ಟೂ ಹಣವನ್ನು ವಸೂಲಿ ಮಾಡಬೇಕು.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ : ಹಾಗಾದರೆ ಪ್ರಶ್ನೆಯನ್ನು ಏತಕ್ಕೆ ಕೇಳಬೇಕು?

ಅಧ್ಯಕ್ಷರು : ಮಾನ್ಯ ಶಿವಾನಂದ ಪಾಟೀಲರೇ, ಪ್ರಶ್ನೆ ಕೇಳಬೇಕು, ಅದರ ಮೇಲೆ ಎರಡು ಉಪಪ್ರಶ್ನೆಗಳನ್ನು ಕೇಳಬಹುದು, ಅದನ್ನು ಬಿಟ್ಟು ಎಲ್ಲರೂ ಪ್ರಶ್ನೆ, ಉಪಪ್ರಶ್ನೆಯನ್ನು ಕೇಳುತ್ತಲೇ ಇದ್ದರೆ ಅದು ಪ್ರಶ್ನೋತ್ತರ ಅನಿಸುವುದಿಲ್ಲ, ಪ್ರಶ್ನೋತ್ತರವನ್ನು ಮುಗಿಸಲಿಕ್ಕಾಗುವುದಿಲ್ಲ.

ಶ್ರೀ ಶಿವಾನಂದ ಎಸ್ ಪಾಟೀಲ್ : ಒಂದೇ ಪ್ರಶ್ನೆಯಲ್ಲಿ ಉತ್ತರವೇ ಬರಲಿಲ್ಲ, ಅದಕ್ಕೇ ನಾನು ಕೇಳಿದ್ದೇನೆ. ಅದನ್ನು ಹೇಳಿಸಿಬಿಡಿ.

ಅಧ್ಯಕ್ಷರು : ಆಯಿತು.

ಒಬ್ಬ ಮಾನ್ಯ ಸದಸ್ಯರು : ರಾಜ್ಯದ ಎಲ್ಲಾ ಗಡಿಭಾಗಗಳಿಂದ ಮಾಹಿತಿಯನ್ನು ತರಿಸಿಕೊಂಡು ಮಾಡಬೇಕು.

ಶ್ರೀ ಶಿವಾನಂದ ಎಸ್ ಪಾಟೀಲ್ : 200203, 200304 ರಲ್ಲಿ ಕಲೆಕ್ಷನ್ ಆ ಭಾಗದಲ್ಲಿ ಹೆಚ್ಚಾಗಿದ್ದರೆ ನಮ್ಮ ಅಧಿಕಾರಿಗಳು ಲೋಪದೋಷ ಎಸಗಿದ್ದರೆ ಅವರ ಮೇಲೆ ಏನಾದರೂ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತಾರೆಯೇ ಎಂಬ ಬಗ್ಗೆ ಒಂದು ಮಾತನ್ನು ಅವರು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ : ಮಹಾರಾಷ್ಟ್ರದಿಂದ ಮಾಹಿತಿಯನ್ನು ತರಿಸುತ್ತೇವೆ. ನೀವೂ ಸಹ ಮಾಹಿತಿಯನ್ನು ತರಿಸಿ. ಒಂದು ವೇಳೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ರೆವಿನ್ಯೂ ಮೇಲೆ ಏನಾದರೂ ಪರಿಣಾಮವಾಗುತ್ತಿದ್ದರೆ ಆ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ಸಿಂಧೂರ ಜಿ. ರಾಜಶೇಖರ

ಶಿಗ್ಗಾಂವ್ ತಾಲ್ಲೂಕಿನ ಬಂಕಾಪುರ ಪಟ್ಟಣದಲ್ಲಿ ಅರಕ್ಷಕ ಠಾಣೆ ಹಾಗೂ ಸಿಬ್ಬಂದಿ ನೇಮಕ

640 (6595) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) : ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶಿಗ್ಗಾಂವ್ ತಾಲ್ಲೂಕ್ ಬಂಕಾಪುರ ಪಟ್ಟಣದಲ್ಲಿ ಆರಕ್ಷಕ ಠಾಣೆ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ, ತೀವ್ರಗತಿಯಲ್ಲಿ ಆರಕ್ಷಕ ಠಾಣೆ ಮಂಜೂರು ಮಾಡಿ, ಸಿಬ್ಬಂದಿ ನೇಮಕಾತಿ ಮಾಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಇ. ಸವಣೂರು ನಗರದಲ್ಲಿ ಬಂದೀಖಾನೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಹಾಗಿದ್ದಲ್ಲಿ, ಬಂದೀಖಾನೆ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ. ಸವಣೂರು ನಗರದದ ಎ.ಪಿ.ಎಂ.ಸಿ. ಯಾರ್ಡಿನಲ್ಲಿ ಪೋಲೀಸ್ ಹೊರವಲಯ (ಔಟ್‌ಪೋಸ್ಟ್) ಸ್ಥಾಪಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಹಾಗಿಲ್ಲದಿದ್ದಲ್ಲಿ, ಪೊಲೀಸ್ ಹೊರವಲಯ ಅತೀ ಅವಶ್ಯಕತೆ ಇದ್ದು, ಮಂಜೂರಾತಿ ಮಾಡಿ ಇದನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಯವರು.)

ಅ. ಬಂದಿದೆ.

ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಹೊರಠಾಣೆಯನ್ನು ಪೋಲಿಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸಲು ಹೊರಠಾಣೆಯ ಸಿಬ್ಬಂದಿ ಬಲ (ಅಂದರೆ ಮುಖ್ಯ ಪೇದೆ01, ಪೇದೆ04) ವನ್ನು ಸಹಾಯಕ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್01, ಮುಖ್ಯ ಪೇದೆ02. ಪೇದೆ06ಗೆ ಏರಿಸುವ ಬಗ್ಗೆ ಪರಿಶೀಲಿಸಿ ಆರ್ಥಿಕ ಮಿತವ್ಯಯ ಆದೇಶಗಳ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಮುಂದೂಡಲಾಗಿದೆ.

ಆ. ಡಿಜಿ ಮತ್ತು ಐಜಿಪಿರವರು ಮರುಪರಿಷ್ಕರಿಸಿದ ಪ್ರಸ್ತಾವನೆಯನ್ನು ಸಲ್ಲಿಸಿದ ನಂತರ ಆದ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಇ. ಹೌದು

ಈ. ಸವಣೂರಿನಲ್ಲಿ ನೂತನ ತಾಲ್ಲೂಕು ಉಪಕಾರಾಗೃಹ ನಿರ್ಮಾಣ ಮಾಡುವ ಯಾವುದೇ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಉ. ಯಾವುದೇ ಪ್ರಸ್ತಾವನೆ ಸ್ವೀಕೃತವಾಗುರುವುದಿಲ್ಲ.

ಶ್ರೀ ಸಿಂಧೂರ ಜಿ. ರಾಜಶೇಖರ್ : ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಅದರಲ್ಲಿ ಈ ಬಂಕಾಪುರ ಪಟ್ಟಣಕ್ಕೆ ಆರಕ್ಷಕ ಠಾಣೆ ಬಹಳ ಅವಶ್ಯಕವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಅದರೊಂದಿಗೆ ಈ ಬಂಕಾಪುರ ಹೊರಠಾಣೆಯನ್ನೂ ಮೇಲ್ದರ್ಜೆಗೇರಿಸುವ ಏನು ಒಂದು ಉದ್ದೇಶ ಹೊಂದಿದೆ. ಈ ಉದ್ದೇಶದಲ್ಲಿ ಮುಖ್ಯ ಪೇದೆ1, ಪೇದೆಗಳು04 ಎಂದು ಉತ್ತರಿಸಿದ್ದಾರೆ. ಅಲ್ಲಿ ಒಂದು ಪೇದೆಯನ್ನು ಬಿಟ್ಟು ಯಾವ ಅಧಿಕಾರಿಗಳು ಸಹ ಅಲ್ಲಿರುವುದಿಲ್ಲ, ಅದರೊಂದಿಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗೆ ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್01, ಮುಖ್ಯಪೇದೆ02 ಪೇದೆ06 ಗೆ ಏರಿಸುವ ಬಗ್ಗೆ ಪರಿಶೀಲಿಸಿ, ಆರ್ಥಿಕ ಸ್ಥಿತಿಗತಿಯನ್ನು ನೋಡಿ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ, ಇದುವರೆಗೆ ಆ ಬಂಕಾಪುರ ಪಟ್ಟಣವನ್ನು ಗ್ರಾಮ ಪಂಚಾಯ್ತಿಯಿಂದ ಪಟ್ಟಣ ಪಂಚಾಯ್ತಿಗೆ ಮೇಲ್ದರ್ಜೆಗೇರಿಸಿ ಏಳು ವರ್ಷಗಳಾಗಿದೆ. ಆ ಏಳು ವರ್ಷಗಳಿಂದ ಅಲ್ಲಿ ಸಾಕಷ್ಟು ಅನಾಹುತಗಳಾಯಿತು, ಇವೆಲ್ಲಾ ಸರ್ಕಾರದ ಗಮನಕ್ಕೆ ಬಂದರೂ ಸಹಿತ ಇದುವರೆಗೆ ಅಲ್ಲಿ ಆರಕ್ಷಕ ಠಾಣೆಯಾಗಿಲ್ಲ, ಅಲ್ಲಿ ಠಾಣೆಯ ಅವಶ್ಯಕತೆ ಬಹಳವಿದೆ ಹಾಗೂ ಈ ಹೊರ ಠಾಣೆಯು ಸಹ ಪಟ್ಟಣ ಬಿಟ್ಟು ಎಡರು ಮೂರು ಕಿಲೋಮೀಟರ್ ಹೊರಗಡೆಯಿದೆ, ಅದರಿಂದ ರಾತ್ರಿ ಏನಾದರೂ ಗಲಾಟೆಗಳಾದರೆ

ಬಂದೋಬಸ್ತ್ ಮಾಡಲಿಕ್ಕೆ ಪೋಲಿಸ್ ಅಧಿಕಾರಿಗಳಿಗೆ ಬಹಳ ತೊಂದರೆಯಾಗುತ್ತದೆ. ಆದಕಾರಣ ಈ ಪೊಲೀಸ್ ಠಾಣೆಯನ್ನು ತೀವ್ರಗತಿಯಿಂದ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಬೃಹತ್, ಮಧ್ಯಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಉತ್ತರ ಹೇಳುತ್ತೇನೆ. ಈಗಾಗಲೇ ಶಿಗ್ಗಾಂವ್ ತಾಲ್ಲೂಕಿನ ತಡಕ್ ಹಾಗೂ ಶಿಗ್ಗಾಂವ್‌ನಲ್ಲಿ ಎರಡು ಪೊಲೀಸ್ ಠಾಣೆಗಳಿವೆ, ಬಂಕಾಪುರದಲ್ಲಿರುವಂತಹ ಹೊರಠಾಣೆಯಲ್ಲಿರುವ ಸಿಬ್ಬಂದಿಗಳ ಅಂಕಿಅಂಶಗಳ ಸಂಖ್ಯೆ ತಪ್ಪು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಬಹುಶಃ ಡೆಪ್ಯುಟೇಷನ್ ಮೇಲೆ ಬೇರೆ ಕಡೆಗೆ ಹೋಗಿರತಕ್ಕಂತಹ ಸಾಧ್ಯತೆಗಳಿರುತ್ತವೆ, ಸ್ಯಾಂಕ್ಷನ್ ಪೋಸ್ಟ್ ಅನ್ನು ಫಿಲ್ ಅಪ್ ಮಾಡಲಿಕ್ಕೆ ಸರ್ಕಾರದಿಂದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಹೊರಠಾಣೆಯೊಂದನ್ನು ಮೇಲ್ದರ್ಜೆಗೇರಿಸಿ ಪೋಲಿಸ್ ಸ್ಟೇಷನ್ ಮಾಡಬೇಕೆಂದು ಹೇಳಿದ್ದಾರೆ, ಇಡೀ ರಾಜ್ಯದಲ್ಲಿ ಇಂತಹ ಪ್ರಸ್ತಾವನೆಗಳು ಬಹಳಷ್ಟಿವೆ, ಹಾಗಾಗಿ ಸರ್ಕಾರದ ಹಣಕಾಸಿನ ಇತಿಮಿತಿಯ ಆಧಾರದ ಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆ. ಖಚಿತವಾಗಿ ನಾವು ಈ ವರ್ಷದಲ್ಲೇ ಮಾಡುತ್ತೇವೆಂಬ ಭರವಸೆಯನ್ನು ಕೊಡತಕ್ಕಂತಹ ಸ್ಥಿತಿಯಲ್ಲಿ ನಾನಿಲ್ಲ, ಆದರೆ ಮಾನ್ಯ ಸದಸ್ಯರು ಹೇಳಿರುವಂತೆ ಅಪಘಾತಗಳು, ಬೇರೆ ಬೇರೆ ಕ್ರಮಿನಲ್ ಆಕ್ಟಿವಿಟೀಸ್ ಜಾಸ್ತಿಯಾಗುವಂಥದ್ದು ಇವನ್ನೆಲ್ಲಾ ತಡೆಗಟ್ಟಲಿಕ್ಕೆ ಪೋಲಿಸ್ ಸಿಬ್ಬಂದಿ ಬೇಕೆಂದು ಕೇಳಿದ್ದಾರೆ, ಅದರ ಬಗ್ಗೆ ಖಂಡಿತವಾಗಿಯೂ ಗೃಹ ಇಲಾಖೆ ಗಮನವನ್ನು ಹರಿಸುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಸೋಮಲಿಂಗಪ್ಪನವರು . . .

ಶ್ರೀ ಸಿಂಧೂರ ರಾಜಶೇಖರ : ಮಾನ್ಯ ಅಧ್ಯಕ್ಷರೆ, ಸವಣೂರಿನಲ್ಲಿ ಬಂಧಿಖಾನೆಯ ಅವಶ್ಯಕತೆಯಿದೆ, ಅಲ್ಲಿ ಬಂಧಿಗಳು ಬಂದರೆ ಅವರನ್ನು ಶಿಗ್ಗಾಂವ್ ಅಥವಾ ಹುಬ್ಬಳ್ಳಿಗೆ ಕಳುಹಿಸಿಕೊಡುವ ಒಂದು ರೂಢಿಯಿದೆ, ಅದನ್ನು ತಪ್ಪಿಸಿ ಸವಣೂರಿಗೆ ಬೇಗನೆ ಒಂದು ಬಂಧೀಖಾನೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಪೋಲೀಸ್ ಸ್ಟೇಷನ್‌ಗಳು ಇದ್ದಹಾಗೆ ಕಾರಾಗೃಹಗಳು ಸಹಿತ, ಒಂದು ಕಾರಗೃಹ ಮಾಡಬೇಕಾದರೆ ನಮಗೆ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತದೆ. ಅವರು ಕೇಳಿರುವುದು ಸರಿಯಾಗಿದೆ, ಈಗ ಹಾವೇರಿ ಹೊಸ ಜಿಲ್ಲೆಯಾಗಿದೆ, ಹಾವೇರಿ ಜಿಲ್ಲೆಯಲ್ಲಿಯೇ ಇನ್ನೂ ನಮಗೆ ಒಂದು ದೊಡ್ಡ ಕಾರಾಗೃಹವನ್ನು ಕಟ್ಟಲಿಕ್ಕೆ ಆಗಿಲ್ಲ, ಈಗ ಇನ್ನೂರು ಜನರು ಇರುವ ಒಂದು ಕಾರಾಗೃಹವನ್ನು ಮಾಡಿದ್ದೇವೆ. ಈಗ ಒಂದು ಸ್ಥಿತಿಗೆ ತಂದಿದ್ದೇವೆ. ಹಂತ ಹಂತವಾಗಿ ಎಲ್ಲಾ ತಾಲ್ಲುಕುಗಳಲ್ಲಿ ಸಹ ಇದನ್ನು ಮಾಡುವಂತಹ ಸಂದರ್ಭದಲ್ಲಿ ಇದನ್ನು ಪರಿಶೀಲಿಸುತ್ತೇವೆ, ಆದರೆ ಇವತ್ತು ವ್ಯವಸ್ಥೆ ಮಾಡಲಿಕ್ಕೆ ಕಷ್ಟವೆನ್ನುವಂತಹ ಮಾತನ್ನು ಹೇಳುತ್ತಿದ್ದೇನೆ.